**ಅಸಲು ದಾವಾ ಸಂಖ್ಯೆ -115/2014**
**DW -02**

**ದಿನಾಂಕ 30-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದು ವರೆದ ಪಾಟಿ ಸವಾಲು ಪ್ರತಿ ವಾದಿಗಳ ಪರ ವಕೀಲರಿಂದ.**

ನನಗೆ ಎಷ್ಟು ಬಾಡಿಗೆ ಬರುತ್ತದೆ ಎಂದು ನೆನಪಿಲ್ಲ. ಸದರಿ ಮನೆಯನ್ನು ನಾನು ಮಾರಾಟ ಮಾಡಿರುತ್ತೇನೆ. ನನಗೆ ಈಗ ಯಾವುದೇ ಬಾಡಿಗೆ ಬರುವುದಿಲ್ಲ. 2008 ನೇ ಇಸವಿಯಲ್ಲಿ ನಾನು ಸದರಿ ಮನೆ ಮಾರಾಟ ಮಾಡಿರುತ್ತೇನೆ. ಸದರಿ ಸ್ವತ್ತನ್ನು ಎಷ್ಟು ಹಣಕ್ಕೆ ಮಾಡಿದ್ದೇನೆ ಎಂದು ನನಗೆ ನೆನಪಿಲ್ಲ. ಸಾಕ್ಷಿಯು ಮುಂದು ವರೆದು ರೂಪಾಯಿ 11,80000/-ಕ್ಕೆ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮಾರಾಟ ಮಾಡಿದ ದಸ್ತಾವೇಜನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ಗಂಡ ಮೃತಪಟ್ಟ ನಂತರ ಸದರಿ ಮನೆ ಮಾರಾಟ ಮಾಡಿರುತ್ತೇನೆ.

-10-

ನನಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ನನಗೆ ಗಂಡು ಮಕ್ಕಳು ಇರುವುದಿಲ್ಲ. ನನ್ನ ಗಂಡನಿಗೆ ಅವರು ಸೇರಿ ನಾಲ್ಕು ಜನ ಸಹೋದರರು ಇರುತ್ತಾರೆ. ನನ್ನ ಗಂಡನಿಗೆ ಮೂರು ಜನ ಸಹೋದರಿಯರು ಇರುತ್ತಾರೆ. ನನಗೆ ಗುಲಬರ್ಗಾದಲ್ಲಿ ಮಾರಾಟ ಮಾಡಿದ ಸ್ವತ್ತು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ನನ್ನ ತಾಯಿ ಖರೀದಿ ಮಾಡಿದ ಒಂದು ಹೊಲ ಮಾತ್ರ ಇರುತ್ತದೆ. ನನ್ನ ತಂದೆಗೆ ಯಾವುದಾರು ಆಸ್ತಿ ಇತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಈಗ ವಾಸವಾಗಿರುವ ಜೇವರ್ಗಿಯ ಮನೆ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ನನ್ನ ತಾಯಿ ತೀರಿಕೊಂಡು ಸುಮಾರು 7-8 ವರ್ಷಗಳು ಆಗಿರುತ್ತವೆ. ಆದರು ಸಹ ನಾವು ವಾಸಮಾಡುವ ಮನೆ ಈಗಲು ಸಹ ನಮ್ಮ ತಾಯಿಯ ಹೆಸರಿನಲ್ಲಿ ಇರುತ್ತದೆ. ನನ್ನ ತಾಯಿಯ ಜೀವಿತ ಕಾಲದಲ್ಲಿ ನಮ್ಮ ಆಸ್ತಿಯ ಬಗ್ಗೆ ನನ್ನ ಮತ್ತು ನನ್ನ ಸಹೋದರು ಸಹೋದರಿಯರ ನಡುವೆ ಯಾವುದೇ ಭೀನ್ನಾಬಿಪ್ರಾಯ ಇರಲ್ಲಿಲ್ಲ. ಈ ದಾವೆಯನ್ನು ಹೊರತುಪಡಿಸಿ ನಮ್ಮ ಆಸ್ತಿಗೆ ಸಂಬಂಧಿಸಿ ಬೇರೆ ಯಾವುದೇ ದಾವೆ ದಾಖಲು ಆಗಿರುವುದಿಲ್ಲ. ಈ ದಾವೆಯನ್ನು ಹೊರತುಪಡಿಸಿ ನಾನಾಗಲಿ, ನನ್ನ ಅಣ್ಣ ತಮ್ಮಂದಿರಾಗಲಿ ಮತ್ತು ನನ್ನ ಅಕ್ಕ ತಂಗಿಯರಾಗಲಿ ಯಾವುದೇ ದಾವೆಯನ್ನು ದಾಖಲು ಮಾಡಿರುವುದಿಲ್ಲ.

ನನ್ನ ತಾಯಿಯ ಹೆಸರಿನಲ್ಲಿ ಇರುವ ಹೊಲ ಈ ದಿನದ ವರೆಗೆ ಅವರ ಹೆಸರಿನಲ್ಲಿ ಇರುತ್ತದೆ. ರೇವನೂರ ಗ್ರಾಮದಲ್ಲಿ ಇರುವ ಹೊಲ ನನ್ನ ಹಾಗೂ ಪ್ರತಿವಾದಿ ನಂಬರ 1 ಮತ್ತು 4 ರವರ ಹೆಸರಿನಲ್ಲಿ ಇರುತ್ತದೆ. ಸದರಿ ರೇವನೂರ ಗ್ರಾಮದ ಹೊಲ 2011 ನೇ ಇಸವಿಯಲ್ಲಿ ಖರೀದಿ ಮಾಡಲಾಗಿದೆ. ನಾನು ಪ್ರತಿವಾದಿ ನಂಬರ 1, ಮತ್ತು 4 ರವರು ಆ ಸಮಯದಲ್ಲಿ ಒಟ್ಟಾಗಿ ವಾಸವಾಗಿದ್ದೆವು. ಶಾಹಾಬಾದನಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಸರ್ವೆ ನಂಬರ 163 ರ ಸ್ವತ್ತನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ರೇವನೂರ ಗ್ರಾಮದ ಹೊಲವನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಶಾಹಾಬಾದನಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಇದ್ದ ಸರ್ವೆ ನಂಬರ 163 ರ ಸ್ವತ್ತನ್ನು 2011 ನನ್ನ ತಾಯಿ ಮಾರಾಟ ಮಾಡಿರುತ್ತಾರೆ.

ರೇವನೂರ ಗ್ರಾಮದ ಹೊಲವನ್ನು ಎಷ್ಟು ಹಣಕ್ಕೆ ಖರೀದಿ ಮಾಡಿದ್ದೇವೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಯಾರಿಂದ ಖರೀದಿ ಮಾಡಿದ್ದೇವೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನ ಚಕ್ಕು ಬಂದಿ ಮತ್ತು ಕಂದಾಯದ ಮೊತ್ತ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಈಗಲು ಸಹ ನನ್ನ, ಪ್ರತಿವಾದಿ 1 ಮತ್ತು 4 ರವರ ಹೆಸರಿನಲ್ಲಿ ಇರುತ್ತದೆ.

ನನ್ನ ದೊಡ್ಡ ಮಗಳು 10 ನೇ ತರಗತಿ ವ್ಯಾಸಂಗ ಮಾಡಿರುತ್ತಾರೆ ಹಾಗೂ ಎರಡನೇ ಮಗಳು ಇಂಜಿನಿಯರಿಂಗ ವ್ಯಾಸಾಂಗ ಮಾಡಿರುತ್ತಾಳೆ. ನನ್ನ ಎರಡನೇ ಮಗಳು ಇಂಜಿನಿಯರಿಂದ ವ್ಯಾಸಾಂಗ ಮಾಡುವಾಗ ಗುಲಬರ್ಗಾದಲ್ಲಿ ವಾಸವಾಗಿದ್ದಳು. ಸದರಿ ವ್ಯಾಸಾಂಗ ಮಾಡಲು ರೂಪಾಯಿ 5 ರಿಂದ 6 ಲಕ್ಷ ಖರ್ಚು ಆಗಿರುತ್ತದೆ. ಸದರಿ ಖರ್ಚು ಭರಿಸಲು ನಾನು ಒಂದು ಪ್ಲಾಟನ್ನು ಮಾರಾಟ ಮಾಡಿರುತ್ತೇನೆ. ಸದರಿ ಪ್ಲಾಟನ್ನು 2014 ರಲ್ಲಿ ಇಬ್ರಾಹಿಮ ಪಾಟೀಲ ರವರಿಗೆ ಮಾರಾಟ ಮಾಡಿರುತ್ತೇನೆ. ನನ್ನ ಮಗಳ ಇಂಜಿನಿಯರಿಂಗ 2018 ರಲ್ಲಿ ಪೂರ್ಣಗೊಂಡಿರುತ್ತದೆ. ನಾನು ಇಬ್ರಾಹಿಮ ಪಾಟೀಲರವರಿಗೆ ಮಾರಾಟ ಮಾಡಿದ ಪ್ಲಾಟನ್ನು 2010 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಪ್ಲಾಟನ್ನು ನಾನು ಯಾರಿಂದ ಖರೀದಿ ಮಾಡಿದ್ದೆ ಎಂದು ನೆನಪಿಲ್ಲ. ಸದರಿ ಪಂಚಾಯತ ನಂಬರ ನನಗೆ ಗೊತ್ತಿಲ್ಲ. ಅದರ ಪ್ಲಾಟ ಸಂಖ್ಯೆ 46 .

-11-

1 ಮತ್ತು 4 ನೇ ಪ್ರತಿವಾದಿಗಳು ದಾವಾ ಸ್ವತ್ತು ಗಳ ಪೈಕಿ ಒಂದು ಸ್ವತ್ತನ್ನು ಇತ್ತಿಚಿಗೆ ಮಾರಾಟ ಮಾಡಿರುತ್ತಾರೆ. ಅದು ಯಾವ ಪ್ಲಾಟ ಎಂದು ನನಗೆ ಗೊತ್ತಿಲ್ಲ. ಸದರಿ ಪ್ಲಾಟನ ಪಟ್ಟಣ ಪಂಚಾಯತಿ ಸಂಖ್ಯೆ 36-11 ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಹಾಗೂ 8 ನೇಪ್ರತಿವಾದಿ ಜೊತೆ ನಾನು ಮಾತನಾಡುವುದಿಲ್ಲ. ವಾದಿಗಳು ಹಾಗೂ 8 ನೇ ಪ್ರತಿವಾದಿ ನಮ್ಮ ಮನೆಗ ಬರುವುದಿಲ್ಲ ಆದ್ದರಿಂದ ನಾವು ಮಾತನಾಡುವುದಿಲ್ಲ. ವಾದಿಗಳು ಮತ್ತು ಪ್ರತಿವಾದಿ 8 ರವರ ಜೊತೆ ನನ್ನ ಅಣ್ಣತಮ್ಮಂದಿರು ಹಾಗೂ ಅಕ್ಕ ತಂಗಿಯರು ಯಾರು ಸಹ ಮಾತನಾಡುವುದಿಲ್ಲ. ಅವರು ಯಾವ ಕಾರಣದಿಂದ ಮಾತನಾಡುವುದಿಲ್ಲ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು 1 ರಿಂದ 4, 6 ಮತ್ತು 7 ಪ್ರತಿವಾದಿಗಳು ಒಟ್ಟಿಗೆ ಮಾತನಾಡಿಕೊಂಡು ಪ್ರತಿವಾದ ಪತ್ರಗಳನ್ನು ಸಲ್ಲಿಸಿರುತ್ತೇವೆ. 1 ರಿಂದ 7 ನೇ ಪ್ರತಿವಾದಿಗಳು ಉತ್ತಮ್ಮ ಸಂಬಂದ ಹೊಂದಿರುತ್ತೇವೆ. 1 ನೇ ಪ್ರತಿವಾದಿ ಹೇಳಿದ ರೀತಿ ನಾವು ಕೇಳುತ್ತೇವೆ ಎಂದರೆ ಸರಿಯಲ್ಲ. 1 ಮತ್ತು 4 ನೇ ಪ್ರತಿವಾದಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ ಎಂದರೆ ನಿಜ.

8 ನೇ ಪ್ರತಿವಾದಿ ವೀಡಿಯೊ ಥಿಯೆಟರ ವ್ಯವಹಾರ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದು ವರೆದು 1 ನೇ ಪ್ರತಿವಾದಿ ಸದರಿ ವ್ಯವಹಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿ ಸದರಿ ವ್ಯವಹಾರ ಮಾಡುತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಲಬರ್ಗಿಯಲ್ಲಿ ಇದ್ದ ಪ್ಲಾಟನ್ನು ಮಾರಾಟ ಮಾಡಿ ಬಂದಂತಹ ಹಣದಿಂದ 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಂತಹ ಪ್ಲಾಟನ್ನು ಖರೀದಿ ಮಾಡಿದ್ದೇನೆ. ಜೇವರ್ಗಿಯಲ್ಲಿ ನನ್ನ ಹೆಸರಿನಲ್ಲಿ 4 ಪ್ಲಾಟಗಳು ಇರುತ್ತವೆ. ಸದರಿ 4 ಪ್ಲಾಟಗಳನ್ನು ಸಹ ಗುಲಬರ್ಗಾದಲ್ಲಿ ಪ್ಲಾಟನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ಖರೀದಿ ಮಾಡಿರುತ್ತೇನೆ. ಸದರಿ ಪ್ಲಾಟಗಳನ್ನು ಎಷ್ಟು ರೂಪಯಿಗಳಿಗೆ ಖರೀದಿ ಮಾಡಿದ್ದೇನೆ ಎಂದು ನನಗೆ

ಗೊತ್ತಿಲ್ಲ.ಸದರಿ ಪ್ಲಾಟಗಳನ್ನು ಯಾರಿಂದ ಖರೀದಿ ಮಾಡಿದ್ದೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ಲಾಟಗಳ ಸಂಖ್ಯೆ 12, 13 ,46,47 ಆಗಿರುತ್ತವೆ. ಸದರಿ ಪ್ಲಾಟಗಳ ಚಕ್ಕು ಬಂದಿ ನನಗೆ ಗೊತ್ತಿಲ್ಲ. ಸದರಿ ಪ್ಲಾಟಗಳಿಗೆ ತೆರಿಗೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಸದರಿ 4 ಪ್ಲಾಟಗಳನ್ನು 1 ಮತ್ತು 4 ನೇ ಪ್ರತಿವಾದಿಗಳು ನನಗೆ ಕೊಡಿಸಿದ್ದಾರೆ. ಸದರಿ ಪ್ಲಾಟಗಳ ತೆರಿಗೆ ಪಾವತಿಯನ್ನು 1 ನೇ ಮತ್ತು 4 ನೇ ಪ್ರತಿವಾದಿಗಳು ಮಾಡುತ್ತಾರೆ. ಸದರಿ ಪ್ಲಾಟಗಳ ಖಾತೆಯನ್ನು 1 ಮತ್ತು 4 ನೇ ಪ್ರತಿವಾದಿಗಳು ನನ್ನ ಹೆಸರಿನಲ್ಲಿ ಮಾಡಿಸಿರುತ್ತಾರೆ.

**ಮುಂದು ವರೆದ ಪಾಟಿ ಸವಾಲು ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟಿ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**
**ಓ.ಹೇ.ಕೆ.ಸರಿ.ಇದೆ.**

ದಿವಾನಿ ನ್ಯಾಯಾಧೀಶರು
ಜೇವರ್ಗಿ